ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ:09:ಯೋಜನೆ:2017-18

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ:07.03.2018

# ಸುತ್ತೋಲೆ

ವಿಷಯ: 2017-18ನೇ ಸಾಲಿನಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಕಛೇರಿ ಹಾಗೂ ಇತರೆ ವೆಚ್ಚಗಳಿಗಾಗಿ ಬಿಡುಗಡೆ ಮಾಡಿರುವ ಅನುದಾನದ ಬಗ್ಗೆ.

ಉಲ್ಲೇಖ: ಈ ಕಛೇರಿಯ ಆದೇಶ ಸಂಖ್ಯೆ ಕಾಶಿಇ:09:ಯೋಜನೆ:ಅ.ಬಿ:2017-18 ದಿನಾಂಕ:10.07.2017, 28.10.2017 ಮತ್ತು 12.02.2018

-------

2017-18ನೇ ಸಾಲಿಗೆ ಲೆಕ್ಕಶೀರ್ಷಿಕೆ:2202-03-103-2-01ರ ಉಪ ಲೆಕ್ಕ ಶೀರ್ಷಿಕೆ: (059), ರಡಿಯಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಿಗೆ ಕಛೇರಿ ವೆಚ್ಚ, ದೂರವಾಣಿ, ವಿದ್ಯುತ್, ನೀರು, ಲೇಖನ ಸಾಮಗ್ರಿ, ಅನ್‌ಸ್ಕಿಲ್ಡ್ ನೌಕರರ ವೇತನ, ಇತರೆ ವೆಚ್ಚಗಳನ್ನು ಭರಿಸಲು ಉಲ್ಲೇಖಿತ ಈ ಕಛೇರಿಯ ಆದೇಶಗಳಲ್ಲಿ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ.

ಬಿಡುಗಡೆ ಮಾಡಿರುವ ಅನುದಾನದಲ್ಲಿ ಕಛೇರಿ ವೆಚ್ಚ, ದೂರವಾಣಿ, ವಿದ್ಯುತ್, ನೀರು, ಲೇಖನ ಸಾಮಗ್ರಿ, ಅನ್‌ಸ್ಕಿಲ್ಡ್ ನೌಕರರ ವೇತನವನ್ನು ಪಾವತಿಸಿ ಅನುದಾನ ಉಳಿಕೆಯಾಗಿದ್ದಲ್ಲಿ, ಆಯಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಅಗತ್ಯಕ್ಕೆ ತಕ್ಕಂತೆ ಪಠ್ಯ ಪುಸ್ತಕ/ಪೀಠೋಪಕರಣಗಳನ್ನು ಉಳಿಕೆಯಾಗಿರುವ ಅನುದಾನದಲ್ಲಿ ಒದಗಿಸಿಕೊಳ್ಳಲು ಅನುಮತಿ ನೀಡಲಾಗಿದೆ.

ಮೇಲಿನ ಕಂಡಿಕೆಯಲ್ಲಿ ತಿಳಿಸಿರುವಂತೆ ಲೆಕ್ಕಶೀರ್ಷಿಕೆ:2202-03-103-2-01ರ ಉಪ ಲೆಕ್ಕಶೀರ್ಷಿಕೆ:(059) ರಡಿಯಲ್ಲಿ ಬಿಡುಗಡೆ ಮಾಡಿರುವ ಅನುದಾನದ ಅವಶ್ಯಕತೆ ಇಲ್ಲದಿದ್ದಲ್ಲಿ ಇಂದೇ ಮರುಒಪ್ಪಿಸುವಂತೆ ಸೂಚಿಸಿದೆ. ಮರುಒಪ್ಪಿಸಿದ ಪತ್ರದ ಸ್ಕ್ಯಾನ್ಡ್ (Scanned copy)ಪ್ರತಿಯನ್ನು dce.plan@gmail.com ಗೆ ಇ-ಮೇಲ್ ಮಾಡುವಂತೆ ತಿಳಿಸಲಾಗಿದೆ.

ಕಾಲೇಜು ಶಿಕ್ಷಣ ನಿರ್ದೇಶಕರು

ಇವರಿಗೆ:

1. ಸಂಬಂಧಿಸಿದ ಕಾಲೇಜುಗಳ ಪ್ರಾಂಶುಪಾಲರುಗಳಿಗೆ - ಸೂಕ್ತ ಕ್ರಮಕ್ಕಾಗಿ.
2. ಪ್ರಾದೇಶಿಕ ಜಂಟಿ ನಿರ್ದೇಶಕರು, ಬೆಂಗಳೂರು/ಮೈಸೂರು/ಮಂಗಳೂರು/ಶಿವಮೊಗ್ಗ/ಧಾರವಾಡ/ಗುಲ್ಬರ್ಗಾ- ಮಾಹಿತಿ ಮತ್ತು ಸೂಕ್ತ ಕ್ರಮಕ್ಕಾಗಿ.
3. ಮಾಹಿತಿ ಅಧಿಕಾರಿಗಳು, ಮಾಹಿತಿ ವಿಭಾಗ, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು-ಇಲಾಖೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
4. ಕಛೇರಿ ಪ್ರತಿ.